ವಸುಮತಿ ಉಡುಪ

# ಆಹಾ ನನ್ನ ಮದುವೆಯಂತೆ...

ಮನೆಕೆಲಸದವರಿಗೂ, ನನಗೂ ಸಾಲಾವಳಿ ಕೂಡಿ ಬರುವುದಿಲ್ಲ ಅನ್ನುವ ವಿಷಯ ಮತ್ತೊಮ್ಮೆ ಸಾಬೀತಾಯ್ತು. ಏನೇನೋ ಕಾರಣಗಳಿಂದ ಆರು ತಿಂಗಳಿಗೆ, ವರ್ಷಕ್ಕೆ ಅನಿವಾರ್ಯವಾಗಿ ಆಗುತ್ತಿತ್ತು ಬದಲಾವಣೆ. ಯಾವತ್ತಿನ ಹಾಗೆ ಅವತ್ತು ಎಂಟು ಗಂಟೆ ಸುಮಾರಿಗೆ ಕೆಲಸಕ್ಕೆ ಬಂದ ಕಾಂತಿ ಹೊರಗಿನ ಅಂಗಳ ಗುಡಿಸಿ ನೀರು ತಳೆದು, ರಂಗೋಲಿ ಹಾಕಲು ಮೊಂಡು ಪೊರಕೆ, ಬಕೆಟ್ಟು ಕೈಗೆತ್ತಿಕೊಳ್ಳುತ್ತಾ ಯಾವ ಉದ್ವೇಗ, ಸಂತಸಗಳೂ ಇಲ್ಲದ ನಿರುದ್ವಿಗ್ನ ಸ್ವರದಲ್ಲಿ ಸಹಜವಾಗಿ ಹೇಳಿದಳು, "ಅಕ್ಕಾ, ನಂಗೆ ಮದುವೆ ಗೊತ್ತಾಯ್ತು..."

"ಹೌದನೇ? ಹುಡುಗನ ಕಡೆಯವರು ಬಂದು ನೋಡಿದ್ದಾಯ್ತಾ? ಒಪ್ಪಿದ್ದಾಯ್ತಾ?"

"ನಿನ್ನೆ ಮಧ್ಯಾನ ಆರು ಸೀಟು ಬಂದಿದ್ರು. ಆದಷ್ಟು ಬೇಗ ಮದುವೆ ಮಾಡ್ಕೊಡಿ ಅಂದಿದಾರೆ."

"ಚೆನ್ನಾಗಿದಾನಾ ಹುಡುಗ?"

ಈಗ ಕಾಂತಿಯ ಮುಖ ಕೊಂಚ ಬೆಳಗಿದಂತೆನಿಸಿತು.

"ಹೂಂ, ಚೆಂದಾಗವ್ರೆ ಅಕ್ಕಾ..." ಅಂದಳು. ಮೇಲೆ ಮೇಲೆ ಸಂತೋಷ ನಟಿಸಿದರೂ ನನ್ನ ಮನಸ್ಸು ವಿಚಲಿತವಾಗಿದ್ದು ಹೌದು. ಇನ್ನು ಹುಡುಕಬೇಕು ಹೊಸ ಕೆಲಸದಾಕೆಯನ್ನು. ನಾನು ನಿರೀಕ್ಷಿಸಿದ ಹೊತ್ತಿನಲ್ಲಿ ಅವಳು ಬರುವಂತವಳಾಗಿರಬೇಕು. ಕೆಲಸ ಕದಿಯದೆ ಚೊಕ್ಕಟವಾಗಿ ಮಾಡುವಂತವಳಾಗಿರಬೇಕು. ಕೈ, ಬಾಯಿ ಶುದ್ಧವಿರಬೇಕು. ಹೇಳಿದ್ದು ಕೇಳಬೇಕು. ಮೂರು ಮೂರು ದಿನಕ್ಕೊಮ್ಮೆ ಹೇಳದೆ ಕೇಳದೆ ರಜಾ ಹಾಕಿ ಎದೆಬಡಿತ ಏರುಪೇರಾಗಿಸದಂತಿರಬೇಕು. ಯಾವುದೋ ನೆಪದಲ್ಲಿ ಪದೇ ಪದೇ ಮುಂಗಡ ಕೇಳದೆ ತಿಂಗಳ ಸಂಬಳಕ್ಕೆ ನಿಯತ್ತಾಗಿರಬೇಕು. ನನ್ನಷ್ಟುದ್ದ ಇದೆ ಬೇಕುಗಳ ಪಟ್ಟಿ. ಇದ್ದಿದ್ದರಲ್ಲಿ ಕಾಂತಿ ಪರವಾಗಿರಲಿಲ್ಲ. ಕೆಲಸದಲ್ಲಿ ನಾಜೂಕು ಅನ್ನುವಂತಿಲ್ಲದಿದ್ದರೂ ಬೇರೆಯವರಿಗೆ ಹೋಲಿಸಿದಲ್ಲಿ ವಾಸಿ. ಧಡಬಡ ಕೆಲಸ ಮುಗಿಸಿ ಓಡಿಹೋಗಲು ನೋಡದೆ ಸಾವಕಾಶವಾಗಿ ಕೆಲಸ ಮಾಡುತ್ತಾಳೆ ಅನ್ನುವುದು ಮೆಚ್ಚತಕ್ಕ ಒಂದಂಶ. ಕದಿಯುವ ಬುದ್ಧಿ ಇಲ್ಲದಿರುವುದು ಮತ್ತೊಂದು. ಅದು ಬಿಟ್ಟರೆ ಎಲ್ಲರ ಹಾಗೆ ಅವಳು. ಸೋಫಾ ಸಂದಿಗೆ, ಮಂಚದ ಸಂದಿಗೆ ಹಿಡಿಕುಂಟೆ ಹೋಗುವುದಿಲ್ಲ. ವರಸರಿವೆ ತಾಗುವುದಿಲ್ಲ. ದಿನಾ ಹೇಳಿದ್ದನ್ನೇ ಹೇಳುತ್ತಿರಲು ಯಾರಿಗಿರುತ್ತದೆ ತಾಳ್ಮೆ? ಅವಳ ಹಿಂದೆ ಹಿಂದೆ ಪತ್ತೆದಾರಿಕೆ ಮಾಡಿಕೊಂಡಿರುವುದಕ್ಕೆ ಪುರುಸೊತ್ತೆಲ್ಲಿರುತ್ತದೆ? ಹೆಚ್ಚೂಕಡಿಮೆ ನಾಲ್ಕು ವರ್ಷಗಳಿಂದ ಈ ಮನೆಗೆ ಕಚ್ಚಿಕೊಂಡಿದ್ದಳು ಕಾಂತಿ. ಅಭ್ಯಾಸ ಮಾತ್ರವಲ್ಲ, ಅನಿವಾರ್ಯ ಕೂಡಾ ಆಗಿಬಿಟ್ಟಿದ್ದಳು. ಕಾಂತಿ ಕೂಡಾ ಈ ಮನೆಯ ಒಬ್ಬ ಸದಸ್ಯೆ ಎನ್ನುವಷ್ಟು ಅವಳು ನನಗೆ ಆತ್ಮೀಯಳಾಗಿದ್ದರೆ ಅದಕ್ಕೆ ಮತ್ತೊಂದು ಕಾರಣ ಇದೆ. ಅದು ಅವಳ ಕುರಿತಾಗಿ ನನಗಿದ್ದ ಸಹಾನುಭೂತಿ. ಅವಳ ಆರೋಗ್ಯದ